doc-415
T-P-2

(1)

R No KRNN 12

19-12-1974

in ★ ★ ★ ★ ★

58 th Year ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

- For Influential Publicity -

ಸ್ವಾಮಿಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ (3 ಪೈಸೆ

ಹುಣಸೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ವವಸೆ

ಕರ್ನಾಟಕ ಪಿ ಡಬ್ಲ್ಯು ಡಿ.
ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ
ಕಚೇರಿ, ಕಟ್ಟಡಗಳ ವಿಭಾಗ, ಮೈಸೂರು

ತಿದುಪಡಿ ಪ್ರಕಟಣೆ

ನಂ ಎಕ್ಸ್ – 34 (ಬಿ)
ತಾ || 28-11-1974

ರೆಫರೆನ್ಸ್ : 1) ಈ ಕಚೇರಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ನಂ ಎಕ್ಸ್ – 34 ತಾ|| 26-9-1974

2) ಈ ಕಚೇರಿಯ ತಿದ್ದುಪಡಿ ಪ್ರಕಟಣೆ. ನಂ ಎಕ್ಸ್ – 34 (ಎ) ತಾ|| 2-11-1974

★

" ಮೈಸೂರಿನಲ್ಲಿ ಹುಡುಗಿಯರಿಗಾಗಿ (ಕಾಲೇಜ್) ಹಾಸ್ಟಲ್ ಕಟ್ಟಡ ನಿರ್ಮಾಣ ಮಾಡುವುದು " ಈ ಕೆಲಸಕ್ಕಾಗಿ ಟೆಂಡರ್‌ಗಳನ್ನು ಸ್ವೀಕರಿಸಲು ಕಡೆಯ ತಾರೀಖು 20-12-1974 ರ ಮಧ್ಯಾಹ್ನ 4 ಗಂಟೆಯ ವರೆವಿಗೆ ವಿಸ್ತರಿಸಲಾಗಿದೆ ಖಾಲಿ ಟೆಂಡರ್ ಫಾರಂಗಳನ್ನು 10-12-1974 ರಿಂದ 19-12 1974 ರ ವರೆವಿಗೆ ಕೊಡಲಾಗುವುದು. ಈ ಕಚೇರಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ನಂ. – 34 ತಾರೀಖು 26-9-1974 ರ ಮತ್ತಿತರ ಎಲ್ಲಾ ಷರತ್ತುಗಳಲ್ಲಿ ಬದಲಾವಣೆ ಇಲ್ಲ

ಸಹಿ/– ಎಲ್. ಶಿವಲಿಂಗಯ್ಯ,
ಎಕ್ಸಿಕ್ಯುಟೀವ್ ಇಂಜಿನಿಯರ್.

ದಿನ್ನವಾಣಿ

ಒಳ್ಳೆಯ ಗೊಡ್ಡು ಬೆದರಿಕೆಯು ಒಬ್ಬ ಮನುಷ್ಯನಿಗೆ ಒಳ್ಳೇ ಬುದ್ಧಿವಾದಕ್ಕಿಂತ ಹೆಚ್ಚು ಪ್ರಯೋಜನಕರವು – ಹೋವ್

ತೆರಿಗೆ ಹೆಚ್ಚಿಸಕೂಡದು

ಬರ್ನ್— ತೆರಿಗೆ ಹೆಚ್ಚಿಸುವ ವಿಷಯದಲ್ಲಿ ಸರಕಾರ ನಡೆಸಿದ ಮತಸಂಗ್ರಹದಲ್ಲಿ ವಿತಿವಿಾರಿದಷ್ಟು ತಿರಸ್ಕಾರ ದೊರೆಯಿತು ದೇಶದ 22 ವಿಭಾಗಗಳು ಪೂರ್ಣ ವಿರೋಧ ಮತಕೊಟ್ಟವು – ಬಡ್ಜೆಟ್‌ನಲ್ಲಿನ ಭಾರಿ ಖಾತಾ ತಗ್ಗಿಸಲು ಹೆಚ್ಚು ಆದಾಯಕ್ಕಾಗಿ ಮತಸಂಗ್ರಹ ಕೇಖರಿಸಲಾಯಿತು

●

ಗಾಂಧಿ ಸ್ಟ್ಯಾಚು

ಬಿಜಾಪುರ— ಇಬ್ಬರು ಸಿನಿಮಾ ತಾರೆಗಳ ಮೆರವಣಿಗೆ ಸಂದರ್ಭದಲ್ಲಿ ಗಾಂಧಿ ಸರ್ಕಲ್‌ನಲ್ಲಿದ್ದ ಗಾಂಧಿ ಸ್ಟ್ಯಾಚು ಮುರಿದು ಹೋಡುದರಿಂದ ಅದರ ಬದಲು ಹೊಸ ಸ್ಟ್ಯಾಚು ಸ್ಥಾಪಿಸಲು ಪೌರಸಭಾ ಸಲಹಾ ಸಮಿತಿ ತುರ್ತು ಸಭೆಯಲ್ಲಿ ನಿರ್ಧರಿಸಿತು.

★

ಇನೊಂದು ಸ್ವಾರಸ್ಯ !

ಬಿಜಾಪುರ— ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಒಬ್ಬ ಮಹಿಳೆ ತಿಂಗಳಿಗೆ ರೂ 75 ರಾಜಕೀಯ ಪೆನ್ಷನ್ ಪಡೆಯುತ್ತಿರುವರೆಂದು ಮಾಜಿ ಶಾಸಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರೂ ಆದ ಶ್ರೀ ಹುಜರೆ ಚೀಫ್ ಸೆಕ್ರೆಟರಿಯವರಿಗೆ ಕೊಟ್ಟಿರುವ ಮನವಿಪತ್ರದಲ್ಲಿ ತಿಳಿಸಿರುವರು

★ ಮುಂಬಾಸು– ಕರ್ನಾಟಕ ಸರಕಾರ ಕಬಿನಿ ಜಲಾಶಯದಿಂದ ಶನಿವಾರ ನೀರು ಬಿಟ್ಟಿರುವದಾಗಿ ಮಂತ್ರಿ ಶ್ರೀ ಷಣ್ಮುಗಂ ರವರು ಪತ್ರಿಕೆಯವರಿಗೆ ತಿಳಿಸಿದರು.

ಕರ್ನಾಟಕಕ್ಕೆ ಜಯಪ್ರಕಾಶರು

ಬೆಂಗಳೂರು— ಶ್ರೀ ಜಯಪ್ರಕಾಶ ನಾರಾಯಣರನ್ನು ಕರ್ನಾಟಕಕ್ಕೆ ಸುಸ್ವಾಗತಿಸುವ ಕಾರ್ಯವನ್ನು ನವನಿರ್ಮಾಣ ಕ್ರಾಂತಿ ಸಮಿತಿ ಕೈಗೊಂಡಿದೆ – ಜೆ ಪಿ ಯವರ ಭೇಟಿ ಕಾಲದಲ್ಲಿ ಮೈಸೂರು ನಗರದಲ್ಲಿ ವಿದ್ಯಾರ್ಥಿಗಳ ಮತ್ತು ಯುವಕರ ಸಮ್ಮೇಳನ ಏರ್ಪಡಿಸಲಾಗುವುದು - ವಿದ್ಯಾರ್ಥಿಗಳು ಮತ್ತು ಯುವಕರು ರಾಜ್ಯದಲ್ಲಿ ಜೆ ಪಿ ಶಕ್ತಿಯುಳಿಯಲು ಹೊಡಬೇಕು – ಎಂಬುದಾಗಿ ಸೋಷಲಿಸ್ಟ್ ಅಧ್ಯಕ್ಷ ಶ್ರೀ ಜಿ. ಹೆಚ್. ಪಟೇಲ್ ಪತ್ರಿಕೆಯವರಿಗೆ ತಿಳಿಸಿದರು

ಜೀತಾ ಪದ್ಧತಿ

ಮೈಸೂರು– ಹಿಂದಿನ ಕಾಲದಿಂದ ನಡೆದುಬಂದಿರುವ ಜೀತಾ ಪದ್ಧತಿ ಇನ್ನೂ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತೆಜಾಲಿಯಲ್ಲಿದೆ ಎಂಬುದು, ಅಲ್ಲಿಗೆ ಮಂತ್ರಿ ಶ್ರೀ ರಾಚಯ್ಯನವರೊಡನೆ ವರ್ತಕೆಯುವರು ಭೇಟಿ ಕೊಟ್ಟಾಗ ಕಂಡುಬಂದಿತು – ರೂ 3000 ಸಾಲಾ ಪಡೆದ ಶ್ರೀ ಪದ್ದಶೆಟ್ಟಿ ಎಂಬುವನು ಅದರ ಪಡ್ಡಿಗಾಗಿ ತನ್ನ ಇಬ್ಬರು ಮಕ್ಕಳನ್ನು ಜೆಂಡೋಳಿಯಲ್ಲಿ ಸಾಲ ಕೊಟ್ಟವನಲ್ಲಿ ಜೀತಕ್ಕಿಟ್ಟಿದ್ದಾನೆ – ಮಹಮದ್ ಎಂಬುವನು ಮತ್ತೊಬ್ಬ ಮುಸ್ಲಿಂನಲ್ಲಿ ರೂ. 300 ಸಾಲಾ ಪಡೆದು ತನ್ನ ಇಬ್ಬರು ಮಕ್ಕಳನ್ನು ಅವನಲ್ಲಿ ಜೀತಕ್ಕೆ ಇಟ್ಟಿದ್ದಾನೆ.

For Large Range of Daily Wear

Nylex, Cotton, Voile, etc Sarees
in up-to-date Designs
Please Visit :

Bank Road Bahusar

ಕುಡಿಯುವ ನೀರಿನ ಸೌಕರ್ಯ

ಹುಣಸೂರು– ಈ ತಾಲ್ಲೂಕಿನ ಹಲವು ಸ್ಥಳಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ಯೋಚಿಸಿರುವದಾಗಿ ಮುಖ ಮಂತ್ರಿ ಶ್ರೀ ದೇವರಾಜಅರಸ್‌ರವರು ರೂ. 32 ಲಕ್ಷ ನೀರು ಸರಬರಾಜು ಸ್ಕೀಂ ಶಂಕುಸ್ಥಾಪನೆ ಸಮಾರಂಭದಲ್ಲಿ ಹೇಳಿದರು.

★

ಮುಷ್ಕರಿಸಿದ್ದ ರೈಲ್ವೇ ನೌಕರರು

ನವದೆಹಲಿ– ಮುಷ್ಕರದಲ್ಲಿ ಭಾಗವಹಿಸಿದ್ದ ರೈಲ್ವೇ ನೌಕರರನ್ನು ಶಿಕ್ಷಿಸುವ ಇಚ್ಛೆ ಸಚಿವಾಲಯಕ್ಕಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

★

ಈ ಲಂಚಕೋರನನ್ನು ನೋಡಿ

ಸೇಲಂ– ಕಮರ್ಷಿಯಲ್ ತೆರಿಗೆ ಕಛೇರಿಯಒಬ್ಬ ಗುಮಾಸ್ತ, ಅವನ ಕಚೇರಿ ಅಧಿಕಾರಿಗಳನ್ನು ಅವರ ಮೇಲೆ ಭ್ರಷ್ಟಾಚಾರವಿರೋ ಅಧಿಕಾರಿಗಳನ್ನು ಬೆದರಿಸಿ ತಾನು ಅದನ್ನು ಸರಿಪಡಿಸುದದಾಗಿ ಲಂಚ ಪಡೆಯುತ್ತಿದ್ದು ಈಗ ಸಿಕ್ಕಿಬಿದ್ದನು !

★

ಪತ್ರಿಕೆಯವರಿಂದ ಬಹಿಷ್ಕಾರ

ಪಾಟ್ನಾ— ಪತ್ರಿಕೆಯವರ ಬಗ್ಗೆ ಮುಖ್ಯ ಮಂತ್ರಿ ಶ್ರೀ ಗಫೂರರು ಅಗೌರವವಾಗಿ ಮಾತನಾಡಿದುದನ್ನು ಪ್ರತಿಭಟಿಸಿ ಶಾಸನ ಸಭೆಯನ್ನು ಪತ್ರಿಕೆಯವರು ನಿನ್ನೆಯೂ ಬಹಿಷ್ಕರಿಸಿದರು.

○

ಕಳವು

ಜಯಪುರ— ಮಾಜಿ ಮಹಾರಾಜರ ಅರಮನೆಯಲ್ಲಿರುವ ಶ್ರೀ ರಾಜರಾಜೇಶ್ವರಿ ದೇವಾಲಯದಲ್ಲಿ ಗಣೇಶವಿಗ್ರಹ, ಚಿನ್ನಾಭರಣಗಳು, ಪವಿತ್ರ ವಸ್ತುಗಳೂ ಕಳುವಾಗಿದೆ – ಈ ದೇವಸ್ಥಾನವನ್ನು ಮಹಾರಾಜ ರಾಂ ಸಿಂಗ್ (1835–1880) ಕಟ್ಟಿಸಿದ್ದು – ವರ್ಷಕೊಂದು ಸಾರಿ, ಶಿವರಾತ್ರಿಯಂದು ಮಾತ್ರ ಸಾರ್ವಜನಿಕರಿಗೆ ತೆರೆಯಲಾಗುವುದು.

ನಟರಾಜ ವಿಗ್ರಹ

ಲಾಸ್ ಏಂಜಲ್ಸ್– ನಟರಾಜ ವಿಗ್ರಹ ಪಡೆಯಲು ಭಾರತ ಸರಕಾರ ಅಮೇರಿಕಾ ಕಲಾಶೇಖರ ಕೋಟ್ಯಾಧೀಶ್ವರ ಕೈಗಾರಿಕೋದ್ಯಮಿ ಮಿ ॥ ಸೈಮನ್ನರ ಮೇಲೆ ಹೂಡಿರುವ ಮೊಖದ್ದಮೆಯಲ್ಲಿ, ಭಾರತವು ವಿಗ್ರಹವನ್ನು ವಾಪಸ್ಸು ಪಡೆಯಬಹುದು, ಆದರೆ ಬೆದರಿಸಿ ಖಂಡಿತವಾಗಿ ಪಡೆಯಲಾರದು ಎಂದು ಸೈಮನ್ನರು ಹೇಳಿದರು – ಸೈಮನ್ನರ ಕಲಾತೇಖರಣೆ 80 ಮಿಲಿಯ ಡಾಲರುಗಳಷ್ಟಿವೆ.

ಮುನಿಸಿಪಲ್ ಕಾರ್ಪೊರೇಷನ್ ವಿಭಜನೆಗೆ ಶಿಫಾರಸು

ಹುಬ್ಬಳ್ಳಿ— ಹುಬ್ಬಳ್ಳಿ-ಧಾರವಾಡದ ಮುನಿಸಿಪಲ್ ಕಾರ್ಪೊರೇಷನ್ನನ್ನು ಹಿಂದಿನಂತೆ ಹುಬ್ಬಳ್ಳಿ ಮತ್ತು ಧಾರವಾಡದ ಪ್ರತ್ಯೇಕ ಮುನಿಸಿಪಲ್ ಸಂಸ್ಥೆಗಳನ್ನಾಗಿ ಮಾಡಲು ಗೌರ್ನರರು ಸರಕಾರಕ್ಕೆ ತಿಳಿಸಿರುವದಾಗಿ ಗೊತ್ತಾಗಿದೆ.

ಮಹಿಳಾ ಚಳವಳಿ

ಬೆಂಗಳೂರು— ಭೂಸುಧಾರಣಾ ಶಾಸನದಲ್ಲಿ ಮಹಿಳೆಯರ ಹಕ್ಕುಬಾಧ್ಯತೆಗೆ ಹೋರಾಡಲು ಒಂದು ಕ್ರಿಯಾ ಸಮಿತಿ ಸ್ಥಾಪಿತವಾಗಿರುವ ವಿಷಯವನ್ನು ಇದರ ಮುಂದಾಳತ್ವ ವಹಿಸಿರುವ ಪ್ರಮುಖ ಮಹಿಳಾ ಅಡ್ವೊಕೇಟರಾದ ಶ್ರೀಮತಿ ಪ್ರಭಾವಾರವರು ಪತ್ರಿಕೆಯವರಿಗೆ ತಿಳಿಸಿದರು – ತಮ್ಮ ಈ ಹೋರಾಟಕ್ಕೆ ಎಲ್ಲಾ ಜಾ ಮತ್ತು ಸ್ಕೂಲು ವಿದ್ಯಾರ್ಥಿಗಳು ಸಿದ್ಧವಿರುವರೆಂದೂ ಹೇಳಿದರು – ಮುಖ್ಯ ಮುಂತ್ರಿಗಳಲ್ಲಿ ನಿಯೋಗ ಹೋಗುವುದಾಗಿಯೂ ಹೇಳಿದರು – ಸರಿಯಾದ ಪ್ರತಿಕ್ರಿಯೆ ದೊರೆಯದಿದ್ದಪಕ್ಷ ತಾ ॥ 18 ರಂದು ವಿಧಾನಸೌಧಕ್ಕೆ ಮೆರವಣಿಗೆಯಲ್ಲಿ ಹೋಗುವುದಾಗಿಯೂ, ಅವಶ್ಯಕ ಬಿದ್ದರೆ ಬುನಾವಣೆ ಬಹಿಷ್ಕಾರ, ಪರಿಸ್ಥಿತಿ ಒದಗಿದಂತೆ ಮುತ್ತಿತರ ಕ್ರಮ ಕೈಗೊಳ್ಳುವದಾಗುವುದೆಂದು ಹೇಳಿದರು.

ವುಡ್‌ಲಾಂಡ್ 6 12 74 ರಿಂದ

ಅಮೋಘ 5 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅಪೆರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ

ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Quality Printing Neat Binding

Lakshminarasimha Press

Sivarampet, Mysore 1

Help The Gorakshana

—Humanitarian Propoganda Monthly....

SHAKTI

SUDHA

A Superb Tonic

Contribute Liberally

to the National Defence Fu

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore